# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.61(ಎಸ್.ಕೆ ಗಾರ್ಡೆನ್)

## ವಾರ್ಡ್ ಸಮಿತಿ ಸಭೆ, ದಿನಾಂಕ: 05-12-2020 ರ ಸಭಾ ನಡವಳಿ

**ಸಂಖ್ಯೆ:** ಸ.ಕಾನಿ.ಅ (ಪು.ನ)/ಪಿಆರ್/05/20-21

ದಿನಾಂಕ: 05-11-2020 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ. 61-ಎಸ್.ಕೆ ಗಾರ್ಡೆನ್ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು ರವರ ವಾರ್ಡ್ ಕಛೇರಿ ಐ.ಟಿ.ಐ ಲೇಔಟ್ ಎಸ್.ಕೆ ಗಾರ್ಡೆನ್ ವಾರ್ಡ್ ಸಂಖ್ಯೆ 61 ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | Atif Ahmed | Nodal Officer ward No. 61-S.K Garden & Asst. Executive Engineer, J.C. Nagar Sub-division |
| 2 | Dr. Zaiba | Medical Officer |
| 3 | Venkatesh | Senior Health Inspector |
| 4 | Harish | JHI Ward No 61 |
| 5 | Srinivas | Senior Vetenary Inspector |
| 6 | Smt: M. Meena | Welfare Tailoring Teacher |
| 7 | Ragavendra N | Tax Inspector |
| 8 | Narasimhaiah | BWSSB |
| 9 | Manohar | JE Bescom |

ಶ್ರೀ ಅತೀಫ್ ಅಹಮ್ಮದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜೆ.ಸಿ ನಗರ ಉಪ ವಿಭಾಗ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು (ನೋಡಲ್ ಅಧಿಕಾರಿ) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ 05-12-2020 ರಂದು ನಡೆದ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.

- **ಘನತ್ಯಾಜ್ಯ ನಿರ್ವಹಣೆ ಕೋಶದ ಅಧಿಕಾರಿಗಳಿಗೆ:**

1. ವಾರ್ಡ್‌ನ ವ್ಯಾಪ್ತಿಯಲ್ಲಿ ಮನೆ ಮನೆಯಿಂದ ಕಸ ಸಂಗ್ರಹಣೆ ಮತ್ತು ಸಾಗಣಿಕೆ ಮಾಡುತ್ತಿರುವ ಆಟೋ ಟಿಪ್ಪರ್ ವಾಹನ ಚಾಲಕರು ಮತ್ತು ಸಹಾಯಕರುಗಳು ತ್ಯಾಜ್ಯ ವಿಗಂಡಣೆ ಮಾಡಿ ಕಸ ಸಂಗ್ರಹಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರಿಗೆ ಸೂಚಿಸಲಾಯಿತು.
2. ಪ್ರತಿ ದಿನ ವಾರ್ಡ್ ಪ್ರದೇಶದಲ್ಲಿ ಉತ್ಪತಿಯಾಗು ತ್ಯಾಜ್ಯ ವಿಲೇವಾರಿ ಅಭಿವೃದ್ಧಿ ಮಾಡುವಂತೆ ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
3. ವಾರ್ಡ್ ವ್ಯಾಪ್ತಿಯ ಬ್ಲಾಕ್ ಸ್ಪಾಟ್‌ಗಳಲ್ಲಿ ಸಿಸಿಟಿವಿ ಕ್ಯಾಮರ ಅಳವಡಿಸುವ ಕುರಿತು ಅಗತ್ಯ ಕ್ರಮ ವಹಿಸುವಂತೆ ಸಂಬಂಧಪಟ್ಟ ಘನತ್ಯಾಜ್ಯ ನಿರ್ವಹಣ ಅಧಿಕಾರಿಗಳಿಗೆ ಸೂಚಿಸಲಾಯಿತು.
4. ಕಸ ವಿಲೇವಾರಿ ಕುರಿತು ದಂಡ ವಿದಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ವಾರ್ಡ್ ಮಾರ್ಷಲ್‌ಗೆ ಸೂಚಿಸಲಾಯಿತು.

- **ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಗೆ:**
  1. ವಾರ್ಡ್ ಪ್ರದೇಶ ಸಾರ್ವಜನಿಕರಿಗೆ ಕೋವಿಡ್-19 ರ ಪರೀಕ್ಷೆ (Rapid Checkup) ಹೆಚ್ಚು ಮಾಡುವಂತೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.
  2. ಮಾಸ್ಕ ಧರಿಸಲು ಸಾರ್ವಜನಿಕರುಗಳಗೆ ಜಾಗೃತಿ ಮೂಡಿಸಲು ಕ್ರಮ ವಹಿಸುವಂತೆ ಸೂಚಿಸಲಾಯಿತು.

- **ವಿದ್ಯುತ್ ವಿಭಾದ ರವರಿಗೆ:**
  1. ರಸ್ತೆಯ ಬೀದಿ ಕೇಬಲ್ ದುರಸ್ಥಿಯನ್ನು ಬಿಬಿಎಂಪಿ ಮತ್ತು ಬಸ್ಕಾಂ ಸೇರೆ ಈ ಕೂಡಲೇ ಸರಿಪಡಿಸುವಂತೆ ಸೂಚಿಸಲಾಯಿತು.
  2. ವಾರ್ಡ್ ವ್ಯಾಪ್ತಿಯಲ್ಲಿ ದುರಸ್ಥಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸುವುದು ಹಾಗೂ ಎಲ್ಇಡಿ ಲೈಟ್ ಅಳವಡಿಸುವಂತೆ ಸೂಚಿಸಲಾಯಿತು.

- **ಕಲ್ಯಾಣ ಇಲಾಖೆ:**
  1. ಒಂಟಿ ಮನೆ ನಿರ್ಮಾಣ ಮಾಡಿರುವ ಫಲಾನುಭವಿಗಳಗೆ ಕಂತಿನ ಹಣ ಪಾವತಿ ಮಾಡಲು ಸೂಚಿಸಲಾಯಿತು.
  2. ಒಂಟಿ ಮನೆ ನಿರ್ಮಾಣ ಮಾಡಲು ಅರ್ಜಿ ಸಲ್ಲಿಸಿರುವ ಫಲಾನಿಭವಿಗಳ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.

- **ಪಶುಸಂಗೋಪನೆ:**
  1. ಅಕ್ರಮ ಮಾಂಸದ ಅಂಗಡಿಗಳಗೆ ನೋಟಿಸ್ ನೀಡಲು ತಿಳಸಿದೆ.

- **ಕಾಮಗಾರಿ ಇಲಾಖೆಗೆ.**
  1. ಸಿಸಿ ರೋಡ್ಸ್ ನಿರ್ಮಾಣ ಮಾಡುವಂತೆ ಸೂಚಿಸಲಾಯಿತು.
  2. 4ನೇ ಮುಖ್ಯ ರಸ್ತೆ, ಎಸ್.ಕೆ ಗಾರ್ಡನ್‌ನ ರಸ್ತೆ ದುರಸ್ಥಿಯ ಬಗ್ಗೆ ಅಗತ್ಯಾ ಕ್ರಮ ವಹಿಸಲು ಸೂಚಿಸಲಾಯಿತು.

- **ಕಂದಾಯ ಇಳಾಖೆ:**
  1. ಸಂಬಂಧಪಟ್ಟ ವಾರ್ಡ್ ಪ್ರದೇಶಗಳಲ್ಲಿ ಆದಾಯ ತೆರಿಗೆಗಳನ್ನು ವಸೂಲಿ ಮಾಡಲು ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

(ಅತೀಫ್ ಅಹಮ್ಮದ್)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 61

ಪ್ರತಿಯನ್ನು:

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
07. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಕಛೇರಿ ಕಡತಕ್ಕೆ.